**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಡಿ.ಟಿ ಶ್ರೀನಿವಾಸ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ**

**ವಿಷಯ:**

ದಿನಾಂಕ:10-03-2026 ರಂದು ಕನ್ನಡ ಪ್ರಭಾ ದಿನಪತ್ರಿಕೆಯಲ್ಲಿ **"9ನೇ ಕ್ಲಾಸ್ ಮಕ್ಕಳು 10ನೇ ಕ್ಲಾಸ್‌ನಲ್ಲಿ ಮಾಯ"** ಎಂಬ ವಿಷಯವು ಪ್ರಕಟವಾಗಿದ್ದು, ಬೆಂಗಳೂರು ಉತ್ತರ ವಲಯದಲ್ಲಿ ಹತ್ತು ಸರ್ಕಾರಿ ಶಾಲೆಗಳಲ್ಲಿ 2024-25ನೇ ಸಾಲಿನಲ್ಲಿ 9ನೇ ತರಗತಿವರೆಗೂ ಓದಿದ 181 ಮಕ್ಕಳು 10ನೇ ತರಗತಿ ದಾಖಲಾತಿಯಲ್ಲಿ ಕಾಣೆಯಾಗಿದ್ದಾರೆ. ಇದು ಶಿಕ್ಷಣ ಇಲಾಖೆಯ ಅಧಿಕಾರಿಗಳ ನಿದ್ದೆಗೆಡಿಸಿದ್ದು, ಆ ಶಾಲೆಗಳಿಂದ ಮಾಹಿತಿ ಕೇಳಿದ್ದಾರೆ.

ಒಂದೇ ತರಗತಿ ಅಂತರದಲ್ಲಿ ಇಷ್ಟೊಂದು ಮಕ್ಕಳ ಸಂಖ್ಯೆ ಕಡಿಮೆಯಾಗಿರುವುದರ ಸುತ್ತಾ ಅಧಿಕಾರಿಗಳಲ್ಲೇ ಹಲವು ಅನುಮಾನಗಳನ್ನು ಹುಟ್ಟು ಹಾಕಿದೆ. ಆ ಮಕ್ಕಳು ವಲಸೆ ಹೋದರಾ? ಶಾಲೆ ಬಿಟ್ಟರಾ? ಬೇರೆ ಶಾಲೆಗಳಿಗೆ ವರ್ಗಾವಣೆ ಆದರಾ? ಇಲ್ಲಾ ಅವರು ಕಲಿಕೆಯಲ್ಲೇನಾದರೂ ಹಿಂದುಳಿದಿರಬಹುದಾದ ಕಾರಣಕ್ಕೆ ಮತ್ತೊಂದು ವರ್ಷ ಹಿಂದಿನ ತರಗತಿಯಲ್ಲೇ ಉಳಿಸಲಾಯಿತಾ? ಎಷ್ಟೆಲ್ಲಾ ಪ್ರಶ್ನೆಗಳು ಹುಟ್ಟಿಕೊಂಡಿರುವ ಹಿನ್ನಲೆಯಲ್ಲಿ ಬೆಂಗಳೂರು ಉತ್ತರ ವಲಯ-2 ರ ಕ್ಷೇತ್ರ ಶಿಕ್ಷಣಾಧಿಕಾರಿ ಅವರು ತಮ್ಮ ವ್ಯಾಪ್ತಿಯಿಂದ ಮಾಹಿತಿ ಕೇಳಿರುತ್ತಾರೆ. ಇದರಲ್ಲಿ 03 ಕರ್ನಾಟಕ ಪಬ್ಲಿಕ್ ಶಾಲೆಗಳು ಸೇರಿವೆ. ಆ ಮಕ್ಕಳು ಎಲ್ಲಿ ಹೋದರು ಎನ್ನುವುದು ಶಾಲೆಗಳು ನೀಡುವ ಉತ್ತರದಿಂದಲೇ ತಿಳಿದು ಬರಬೇಕಾಗಿದೆ.

ಬೆಂಗಳೂರು ನಗರ ಶಾಲೆಯಲ್ಲಿ 2024-25ನೇ ಸಾಲಿನಲ್ಲಿ ಒಟ್ಟಾರೆ 10 ಶಾಲೆಗಳಲ್ಲಿ 181 ವಿದ್ಯಾರ್ಥಿಗಳು ಕಾಣೆಯಾಗಲು ನಿಖರವಾದ ಮಾಹಿತಿಯನ್ನು ಆಯಾ ಶಾಲೆಗಳಿಂದ ಪಡೆದು ಇದರಲ್ಲಿ ಯಾವುದಾದರೂ ತಪ್ಪಿತಸ್ಥರಿದ್ದರೆ ಅವರ ಮೇಲೆ ಕ್ರಮ ಕೈಗೊಂಡು ಈ ರೀತಿ ಪ್ರಕರಣಗಳು ಮರುಕಳಿಸದಂತೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಿಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುತ್ತಾರೆ.

**ಉತ್ತರ:-**

ದಿನಾಂಕ:10.03.2026 ರಂದು ಕನ್ನಡ ಪ್ರಭಾ ದಿನಪತ್ರಿಕೆಯಲ್ಲಿ **"9ನೇ ಕ್ಲಾಸ್ ಮಕ್ಕಳು 10ನೇ ಕ್ಲಾಸ್‌ನಲ್ಲಿ ಮಾಯ"** ಎಂಬ ವಿಷಯಶೀರ್ಷಿಕೆ ಪ್ರಕಟವಾಗಿರುತ್ತದೆ. ಬೆಂಗಳೂರು ಉತ್ತರ ವಲಯ-02 ರ ವ್ಯಾಪ್ತಿಯಲ್ಲಿ 10 ಸರ್ಕಾರಿ ಶಾಲೆಗಳಿದ್ದು, ಈ ಶಾಲೆಗಳ 09ನೇ ತರಗತಿಯಲ್ಲಿ

ವ್ಯಾಸಂಗ ಮಾಡುತ್ತಿದ್ದ ಒಟ್ಟು 181 ವಿದ್ಯಾರ್ಥಿಗಳಲ್ಲಿ 83 ವಿದ್ಯಾರ್ಥಿಗಳು ವರ್ಗಾವಣೆ ಪತ್ರ ಪಡೆದಿರುತ್ತಾರೆ ಮತ್ತು 79 ವಿದ್ಯಾರ್ಥಿಗಳು ಅನುತ್ತೀರ್ಣರಾಗಿ 9ನೇ ತರಗತಿಯಲ್ಲಿ ವ್ಯಾಸಂಗ ಮುಂದುವರೆಸಿರುತ್ತಾರೆ, ಹಾಗೂ 19 ವಿದ್ಯಾರ್ಥಿಗಳು ವಾಸಸ್ಥಳ ಸ್ಥಳಾಂತರಗೊಂಡು ಹೊರ ರಾಜ್ಯಕ್ಕೆ ವಲಸೆ ಹೋಗಿರುತ್ತಾರೆ, ಈ ಕಾರಣಗಳ ಹಿನ್ನಲೆಯಲ್ಲಿ ಒಟ್ಟು 181 ಮಕ್ಕಳು ಮುಂದಿನ ತರಗತಿಯಾದ 10ನೇ ತರಗತಿ ದಾಖಲಾತಿಯಾಗಿರುವುದಿಲ್ಲ.

**ಸಂಖ್ಯೆ: ಇಪಿ 108 ಎಸ್‌ಇಎಸ್ 2026**

**(ಎಸ್ ಮಧುಬಂಗಾರಪ್ಪ)**

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ**

**ಇಲಾಖಾ ಸಚಿವರು**